<u>ಮಾನ್ಯ ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನಾಗಮಂಗಲ.</u>

<u>ಉಪಸ್ಥಿತರು</u>
ಶ್ರೀ ಕೆ.ಪಿ. ಸಿದ್ದಪ್ಪಾಜಿ. ಬಿ.ಎ,. ಎಲ್.ಎಲ್.ಬಿ.
ಮಾನ್ಯ ಅಪರ ದಿವಾನಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ.

<u>ದಿನಾಂಕ **26** ನೇ ಅಕ್ಟೋಬರ್ **2024**</u>

<u>ಅಸಲು ದಾವಾ ಸಂಖ್ಯೆ: **342/2022**</u>

ವಾದಿ : ಶ್ರೀಮತಿ ವೆಂಕಟಲಕ್ಷ್ಮಮ್ಮ

-: ವಿರುದ್ಧ :-

ಪ್ರತಿವಾದಿ : ಗಿರೀಗೌಡ ಮತ್ತು ಇತರರು

<u>**1** ನೇ ಮಧ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ</u>

ಅರ್ಜಿದಾರರು/ ವಾದಿ : ಶ್ರೀಮತಿ ವೆಂಕಟಲಕ್ಷ್ಮಮ್ಮ

(ಪ್ರತಿನಿಧಿಸುವವರುಃ ಶ್ರೀ ಸಿ.ಆರ್., ವಕೀಲರು)

-: ವಿರುದ್ಧ :-

ಎದುರುದಾರ/ ಪ್ರತಿವಾದಿ : ಗಿರೀಗೌಡ ಮತ್ತು ಇತರರು

( ಪ್ರತಿನಿಧಿಸುವವರುಃ ಶ್ರೀ ಟಿ.ಕೆ.ಆರ್.ಜಿ. ವಕೀಲರು)

<u>**1** ನೇ ಮಧ್ಯಂತರ ಅರ್ಜಿಯ ಮೇಲಿನ ಆದೇಶ</u>

ವಾದಿಯು ಪ್ರಸ್ತುತ 1 ನೇ ಮಧ್ಯಂತರ ಅರ್ಜಿಯನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ದಾವೆಯು ಸಂಪೂರ್ಣವಾಗಿ ಇತ್ಯರ್ಥಗೊಳ್ಳುವವರೆಗೆ ಪ್ರತಿವಾದಿಗಳ, ಅವರ ಏಜೆಂಟು, ಸೇವಕರು ಅಥವಾ ಅವರ ಪರವಾಗಿ ನಡೆದುಕೊಳ್ಳುವ ಯಾವನೇ ವ್ಯಕ್ತಿಯ ವಿರುದ್ಧ ವಾದಿಯ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಹೊರಡಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ವಾದಿಯು ಮಧ್ಯಂತರ ಅರ್ಜಿಯ ಸಮರ್ಥನೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ವಾದಿಯು ಹೇಳುವುದೇನೆಂದರೆ, ವಾದಿಯ ಮಾವ ಹೆಚ್. ತಿಮ್ಮಯ್ಯ ಬಿನ್ ತಬಸೇಗೌಡರವರು ದಾವಾ ಆಸ್ತಿ ಸರ್ವೆ ನಂಬರ್ 22 ವಿಸ್ತೀರ್ಣ 3 ಎಕರೆ 9 ಗುಂಟೆ ಖರಾಬು ಕಳೆದು 2 ಎಕರೆ 26 ಗುಂಟೆ ಜಮೀನನ್ನು ದಿನಾಂಕ 24-10-1944 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ಲಕ್ಕಣ್ಣರವರ ಮಗ ತಿಮ್ಮಯ್ಯ ಮತ್ತು ಆತನ ಚಿಕ್ಕಪ್ಪ ದಾಸೇಗೌಡರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಕ್ರಯಕ್ಕೆ ಪಡೆದ ದಿನದಿಂದ ತನ್ನ ಜೀವಿತಾವಧಿಯವರೆಗೂ ವಾದಿಯ ಮಾವ ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದರು. ಅವರ ಮರಣ ನಂತರ ವಾದಿಯ ಗಂಡ ಹೆಚ್. ಟಿ. ವೆಂಕಟೇಶಯ್ಯರವರು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿದ್ದರು. ಸದರಿ ಹೆಚ್. ಟಿ. ವೆಂಕಟೇಶಯ್ಯರವರ ಮರಣ ನಂತರ ವಾದಿಯು ದಾವಾ ಆಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ. ದಿನಾಂಕ 28-08-2022 ರಂದು ವಾದಿಯು ದಾವಾ ಆಸ್ತಿಯಲ್ಲಿ ಜೆಸಿಬಿ ಇಂದ ಕೆಲಸ ಮಾಡುತ್ತಿದ್ದಾಗ ಪ್ರತಿವಾದಿಗಳು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆಯನ್ನು ಕೊಟ್ಟಿರುತ್ತಾರೆ. ವಾದಿಯು ಈ ಬಗ್ಗೆ ಪೋಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದು, ಪ್ರತಿವಾದಿಗಳಿಗೆ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಡದಂತೆ ಹೇಳಿದರು ಸಹ ಪ್ರತಿವಾದಿಗಳು ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ ತೊಂದರೆಯನ್ನು ನೀಡಿರುತ್ತಾರೆ. ಆದ್ದರಿಂದ, ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ.

3. ವಾದಿಯು ಮುಂದುವರೆದು ಹೇಳುವುದೇನೆಂದರೆ, ವಾದಿಯ ಪರವಾಗಿ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆ ಮತ್ತು ಅನುಕೂಲತೆಯ ಒಲವು ಇದ್ದು, ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಮತ್ತು ಹಾನಿ ಸಂಭವಿಸುತ್ತದೆ. ಆದ್ದರಿಂದ ಪ್ರಸ್ತುತ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಪ್ರತಿವಾದಿಗಳು ತಾವು ಸಲ್ಲಿಸಿರುವ ಪ್ರತಿವಾದ ಪತ್ರವನ್ನು 1 ನೇ ಮಧ್ಯಂತರ ಅರ್ಜಿಗೆ ತಕರಾರು ಎಂದು ಪರಿಗಣಿಸಲು ಕೋರಿರುತ್ತಾರೆ. ಪ್ರತಿವಾದಿಗಳು ತಮ್ಮ ಪ್ರತಿವಾದ ಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಯನ್ನು ಅಲ್ಲೆಗಳೆದಿರುತ್ತಾರೆ. ಮುಂದುವರೆದು ದಾವಾ ಆಸ್ತಿಯು ಮೂಲತಃ ಪ್ರತಿವಾದಿಗಳ ಮುತ್ತಾತ ಮರೀಗೌಡರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಮರೀಗೌಡರವರಿಗೆ 1 ನೇ ತರ್ಕೆಗೌಡ, 2 ನೇ ದಾಸೇಗೌಡ, 3 ನೇ ಮೂಡಲಗಿರಿಗೌಡ ಉಃ ಗುಂಡೆಗೌಡ ಎಂಬ ಮೂರು ಜನ ಮಕ್ಕಳು. ಸದರಿ ಮೂವರು ಮರಣ ಹೊಂದಿದ್ದು, ಅವರ ಜೀವಿತಾವಧಿಯಲ್ಲಿ ಪಿತ್ರಾರ್ಜಿತ ಮತ್ತು ಒಟ್ಟು ಕುಟುಂಬದ ಆಸ್ತಿಗಳನ್ನು ಬಾಯಿ ಮಾತಿನ ಮುಖಾಂತರ ಸುಮಾರು 75 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ. ಆ ಪ್ರಕಾರ ದಾವಾ ಆಸ್ತಿ ಸರ್ವೆ

ನಂಬರ್ 22 ವಿಸ್ತೀರ್ಣ 3 ಎಕರೆ 9 ಗುಂಟೆ ಜಮೀನು ಮರೀಗೌಡರ 3 ಜನ ಮಕ್ಕಳಿಗೂ ತಲಾ 1 ಎಕರೆ 3 ಗುಂಟೆಯಂತೆ ಹಂಚಿಕೆಯಾಗಿರುತ್ತದೆ. ಅದರಂತೆ ತಮ್ಮ ಹಿಸ್ಸೆಗೆ ಬಂದ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ಆದರೆ ವಿಭಾಗದಂತೆ ತಮ್ಮ ಹೆಸರುಗಳಿಗೆ ಖಾತೆಯನ್ನು ವರ್ಗಾಯಿಸಿಕೊಂಡಿರುವುದಿಲ್ಲ. ಮುಂದುವರೆದು ಹೇಳುವುದೇನೆಂದರೆ, ತರ್ಕಗೌಡನ ಮಗ ತಿಮ್ಮಯ್ಯನಿಗಾಗಲಿ ಅಥವಾ ದಾಸೇಗೌಡರಿಗಾಗಲಿ ಜಮೀನನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಹಾಗೂ ದಾಖಲೆಗಳು ಇರಲಿಲ್ಲ. ಆಗಿದ್ದಾಗ್ಯೂ ವಾದಿಯು ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತಾರೆ. ಇತ್ತಿಚೆಗೆ ಪ್ರತಿವಾದಿಗಳಿಗೆ ಸರ್ವೆ ಇಲಾಖೆಯಿಂದ ದಿನಾಂಕ 14-02-2019 ರಂದು ನೋಟೀಸ್ ಬಂದಾಗ ಪ್ರತಿವಾದಿಗಳು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವಾದಿಯು ದಾಖಲೆಗಳನ್ನು ಸೃಷ್ಟಿಸಿಕೊಂಡಿರುವ ವಿಚಾರ ತಿಳಿದಿರುತ್ತದೆ. ನಂತರ ವಾದಿಯನ್ನು ವಿಚಾರಿಸಲಾಗಿ ಪ್ರತಿವಾದಿಗಳ ತಾತಾ ಗುಂಡೆಗೌಡರ ಹಿಸ್ಸೆಗೆ ಬಂದಿರುವ 1 ಎಕರೆ 3 ಗುಂಟೆ ಜಮೀನಿನ ಬಗ್ಗೆ ಖಾತೆಗೆ ಒಪ್ಪಿಗೆ ನೀಡಿ ವಾಪಸ್ಸು ಮಾಡಿಸಿಕೊಡುವುದಾಗಿ ಹೇಳಿ ತದ ನಂತರ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ದಾವೆಯನ್ನು ವಜಾಗೊಳಿಗೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಉಭಯ ಪಕ್ಷಗಾರರ ಪರ ಹಾಜರಾಗುವ ಮಾನ್ಯ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಈ ದಾವೆಗೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

6. ಈ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

<u>ಅಂಶಗಳು</u>

1. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ಮೊಕದಮೆಯನ್ನು ತೋರ್ಪಡಿಸಿದ್ದಾರೆಯೇ?

2. ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

3. 1 ನೇ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ?

4. ಏನು ಆದೇಶ?

7. ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ ಸಂಖ್ಯೆ 1 | : | ಸಕರಾತ್ಮಕವಾಗಿ. |
| ಅಂಶ ಸಂಖ್ಯೆ 2 | : | ಸಕರಾತ್ಮಕವಾಗಿ. |
| ಅಂಶ ಸಂಖ್ಯೆ 3 | : | ಸಕರಾತ್ಮಕವಾಗಿ. |
| ಅಂಶ ಸಂಖ್ಯೆ 4 | : | ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ. |

## ಕಾರಣಗಳು

8. **ಅಂಶ ಸಂಖ್ಯೆ 1 ರಿಂದ 3 :-** ಸದರಿ ಅಂಶಗಳು ಪರಸ್ಪರ ಒಂದಕ್ಕೊಂದು ಪೂರಕವಾಗಿದ್ದು, ಅಂಶ ಸಂಖ್ಯೆ1 ರ ಮೇಲಿನ ಚರ್ಚೆಯು ಉಳಿದ ಅಂಶಗಳಲ್ಲಿ ಪುನರಾವರ್ತನೆಯಾಗುವುದರಿಂದ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ವಾದಿಯು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ.

10. ದಾವಾ ಆಸ್ತಿಯ ವಿವರಣೆ ಈ ಕೆಳಕಂಡಂತೆ ಇರುತ್ತದೆ

ನಾಗಮಂಗಲ ತಾಲೂಕು, ದೇವಲಾಪುರ ಹೊಬಳಿ, ತೂಬಿನಕೆರೆ ಗ್ರಾಮದ ಸರ್ವೆ ನಂಬರ್ 22, ವಿಸ್ತೀರ್ಣ3 ಎಕರೆ 09 ಗುಂಟೆ. ಖರಾಬು 23 ಗುಂಟೆ ಉಳಿಕೆ 2 ಎಕರೆ, 26 ಗುಂಟೆ ಜಮೀನಿಗೆ ಚೆಕ್ಕು ಬಂಧಿ:

| | | |
|---|---|---|
| ಪೂರ್ವಕ್ಕೆ | : | ರಾಮನ ಹೊಲ |
| ಪಶ್ಚಿಮಕ್ಕೆ | : | ಓಣಿ |
| ಉತ್ತರಕ್ಕೆ | : | ಓಣಿ |
| ದಕ್ಷಿಣಕ್ಕೆ | : | ದೇವಲಾಪುರ ಗ್ರಾಮದ ಎಲ್ಲೆ |

11. ವಾದಿಯು ನ್ಯಾಯಾ ಸಮ್ಮತ ತಾತ್ಕಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಹೊಂದಿರುತ್ತಾರೆಯೇ ಎಂದು ತಿಳಿಯಲು ಈ ನ್ಯಾಯಾಲಯವು ವಾದಿಯು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿರುತ್ತದೆ. ದಿನಾಂಕ 24-10-1944 ರ

ಕ್ರಯ ಪತ್ರದ ದೃಡಿಕೃತ ಪ್ರತಿಯನ್ನು ಪರಿಶೀಲಿಸಿದಾಗ ವಾದಿಯ ಮಾವ ಹೆಚ್ ತಿಮ್ಮಯ್ಯ ಬಿನ್ ತಬಸೇಗೌಡರವರು ದಿನಾಂಕ 24-10-1944 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ದಾವಾ ಸರ್ವೆ ನಂಬರ್ 22 ವಿಸ್ತೀರ್ಣ 23 ಗುಂಟೆ ಖರಾಬು ಸೇರಿ ಒಟ್ಟು 3 ಎಕರೆ 9 ಗುಂಟೆ ಜಮೀನನ್ನು ಲಕ್ಕಣ್ಣನರವರ ಮಗ ತಿಮ್ಮಯ್ಯ ಮತ್ತು ಆತನ ಚಿಕ್ಕಪ್ಪ ದಾಸೇಗೌಡರಿಂದ ಕ್ರಯಕ್ಕೆ ಪಡೆದಿರುವುದಾಗಿ ಕಂಡು ಬರುತ್ತದೆ. ಇಂಡೆಕ್ಸ್ ಆಫ್ ಲ್ಯಾಂಡ್ ಮತ್ತು ಕೈ ಬರವಣಿಗೆ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ಕ್ರಯ ಪತ್ರದಂತೆ ಆರ್‌ಆರ್. ನಂಬರ್ 1071 ರೀತ್ಯಾ ವಾದಿಯ ಮಾವ ಹೆಚ್. ತಿಮ್ಮಯ್ಯರವರ ಹೆಸರಿಗೆ ಖಾತೆಯಾಗಿರುವುದು ಕಂಡು ಬರುತ್ತವೆ.

12. ಕೈ ಬರವಣಿಗೆ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ವಾದಿಯ ಮಾವನ ಹೆಸರಿನಿಂದ ವಾದಿಯ ಗಂಡ ವೆಂಕಟೇಶಯ್ಯರವರ ಹೆಸರಿಗೆ ಐಹೆಚ್‌ಸಿ ನಂಬರ್ 2/83-84 ರಂತೆ ಖಾತೆಯಾಗಿರುವುದು ಕಂಡು ಬರುತ್ತದೆ. ಗಣಕೀಕೃತ ಎಂ.ಆರ್. ಮತ್ತು ಗಣಕೀಕೃತ ಪಹಣಿ ಪತ್ರಿಕೆಗಳನ್ನು ಪರಿಶೀಲಿಸಿದಾಗ ವಾದಿಯ ಹೆಸರಿಗೆ ಪೌತಿ ಮೇರೆಗೆ ತನ್ನ ಗಂಡನ ಹೆಸರಿನಿಂದ ಎಂ.ಆರ್.ನಂಬರ್ 1/2006-07 ರ ರೀತ್ಯಾ ಖಾತೆಯು ವರ್ಗಾವಣೆಯಾಗಿರುವುದು ಕಂಡು ಬರುತ್ತದೆ. ಕಂದಾಯ ರಶೀದಿಗಳನ್ನು ಪರಿಶೀಲಿಸಿದಾಗ ವಾದಿಯು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿಸಿರುವುದು ಕಂಡು ಬರುತ್ತದೆ.

13. ಈ ದಾವೆಯಲ್ಲಿ ಪ್ರತಿವಾದಿಗಳ ನಿಲುವು ಏನೆಂದರೆ ದಾವಾ ಆಸ್ತಿಯು ಪ್ರತಿವಾದಿಗಳ ಮುತ್ತಾತ ಮರೀಗೌಡರವರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಯಾಗಿದ್ದು, ತರ್ಕೆಗೌಡನ ಮಗ ತಿಮ್ಮಯ್ಯನಿಗಾಗಲಿ ಅಥವಾ ದಾಸೇಗೌಡನಿಗಾಗಲಿ ದಾವಾ ಆಸಿಯನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇರುವುದಿಲ್ಲ. ವಾದಿಯು ದಾವಾ ಆಸ್ತಿಗೆ ಸಂಬಂದಿಸಿದಂತೆ ದಾಖಲೆಗಳು ಸೃಷ್ಟಿಸಿಕೊಂಡಿರುತ್ತಾರೆ ಎಂಬುದಾಗಿರುತ್ತದೆ. ಆದರೆ, ಪ್ರತಿವಾದಿಗಳು ಈ ಹಂತದಲ್ಲಿ ತಮ್ಮ ನಿಲುವಿಗೆ ಪೂರ್ವಕವಾಗಿ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಅಲ್ಲದೇ, ಪ್ರತಿವಾದಿಗಳು ತಾವು ತೆಗೆದುಕೊಂಡಿರುವ ನಿಲುವಿಗೆ ಸಂಪೂರ್ಣ ವಿಚಾರಣೆಯು ಅಗತ್ಯವಿರುತ್ತದೆ.

14. ವಾದಿಯು ಹಾಜರು ಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಈ ಹಂತದಲ್ಲಿ ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧಿನಾನುಭವದಲ್ಲಿರುವುದು ಕಂಡು ಬರುತ್ತದೆ. ವಾದಿಯು ತನ್ನ ದಾಖಲೆಗಳ ಮುಖಾಂತರ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದೆಮೆ ಇರುವುದನ್ನು ನ್ಯಾಯಾಲಯಕ್ಕೆ ತೋರಿಸಿಕೊಟ್ಟಿರುತ್ತಾರೆ. ಈ ಹಂತದಲ್ಲಿ ಪ್ರತಿವಾದಿಗಳನ್ನು ವಾದಿಯ ದಾವಾ ಸ್ವತ್ತಿನ ಸ್ವಾಧೀನಾನುಭವಕ್ಕೆ

ಅಡ್ಡಿ ಪಡಿಸದಂತೆ ತಾತ್ಕಲಿಕವಾಗಿ ನಿರ್ಬಂಧಿಸದಿದ್ದಲ್ಲಿ ಬಹು ವ್ಯಾಜ್ಯಕ್ಕೆ ಕಾರಣವಾಗುತ್ತದೆ. ಅಲ್ಲದೆ, ವಾದಿಗೆ ತುಂಬಲಾರದ ನಷ್ಟ, ಹಾನಿ ಮತ್ತು ಕೇಡು ಸಂಭವಿಸುತ್ತದೆ. ಆದ್ದರಿಂದ, ಈ ನ್ಯಾಯಾಲಯವು ಅಂಶ 1 ರಿಂದ 3 ನ್ನು ಸಕರಾತ್ಮಕವಾಗಿ ಉತ್ತರಿಸಿರುತ್ತದೆ.

15. <u>ಅಂಶ ಸಂಖ್ಯೆ **4:-**</u> ಮೇಲ್ಕಂಡ ಕಾರಣಗಳಿಗೆ ಈ ಕೆಳಕಂಡಂತೆ ಅಂತಿಮ ಆದೇಶ.

<u>**ಆದೇಶ**</u>

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲಾಗಿದೆ.

ದಾವೆಯು ಸಂಪೂರ್ಣವಾಗಿ ಇತ್ಯರ್ಥಗೊಳ್ಳುವವರೆಗೆ ಪ್ರತಿವಾದಿಗಳು, ಅವರ ಏಜೆಂಟ್, ಸೇವಕರು, ಅನುಯಾಯಿಗಳು ಮತ್ತು ಅವರ ಪರವಾಗಿ ನಡೆದುಕೊಳ್ಳುವವರು ವಾದಿಯ ದಾವಾ ಆಸ್ತಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡದಂತೆ ಈ ಮೂಲಕ ತಾತ್ಕಲಿಕವಾಗಿ ನಿರ್ಬಂಧಿಸಲಾಗಿದೆ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 26 ನೇ ಅಕ್ಟೋಬರ್ 2024 ರಂದು ನಾನು ಉದ್ಘೋಷಿಸಿದ್ದೇನೆ)*

**(ಕೆ.ಪಿ. ಸಿದ್ದಪ್ಪಾಜಿ)**
ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು ನಾಗಮಂಗಲ.